
ಗುರು ಹೇಳಿದ ಮಾರ್ಗವೂ ಅನೇಕ ವೇಳೆ ಅಂತಿಮವಾಗಿರುವುದಿಲ್ಲವಲ್ಲ! ಗುರುವನ್ನೂ ದಾಟಿ ಶಿಷ್ಯನು ಅನ್ವೇಷಿಸಬೇಕಾದ ಸಂಗತಿಗಳು ಇದ್ದೇ ಇರುತ್ತವೆ. ಹಾಗೆ ರಾಘವಾಂಕ ತುಳಿದ ಹೊಸ ಹಾದಿ ಸರಿ ಇತ್ತು. ಯಾಕೆಂದರೆ, ಆವರೆಗೆ ಅನೇಕಾನೇಕ ಕವಿಗಳು ತಮ್ಮ ಆಶ್ರಯದಾತರನ್ನು ರಣವೀರರು, ಸುಂದರಾಂಗರು, ಪ್ರಿಯಗಳ್ಳರು ಎಂದು ಹೇಳಿಕೊಂಡು ಬಂದರೆ, ರಾಘವಾಂಕನ ನಾಯಕ ಹರಿಶ್ಚಂದ್ರ ತನ್ನದೆಲ್ಲ ಬಿರುದುಗಳನ್ನು ಕಳೆದುಕೊಂಡು ಬರಿದೆ ಮಾನ ಮುಚ್ಚುವ ಉಡುಗೆಯ ಮೇಲೆ ಸ್ಮಶಾನದಲ್ಲಿ ನಿಲ್ಲಬೇಕಾಗುತ್ತದೆ. ದೈವ ಸಾಕ್ಷಾತ್ಕಾರ, ಸತ್ಯ ಸಾಕ್ಷಾತ್ಕಾರ ಸ್ಮಶಾನದಲ್ಲಿಯೂ ಆಗಬಹುದೆಂಬುದನ್ನು ರಾಘವಾಂಕ ನಿರೂಪಿಸುತ್ತಾನೆ. ಸತ್ಯದ ಮಾರ್ಗ ಅದೆಷ್ಟು ಕಠಿಣವಾದುದೆಂದರೆ, ಅದು ಇರುವ ಇಹದ ಎಲ್ಲವನ್ನೂ ಕಳೆದುಕೊಳ್ಳುವುದನ್ನು ಮಾತ್ರ ಹೇಳುವುದಿಲ್ಲ. ತಾನು ನಂಬಿಕೊಂಡು ಬಂದ ಸಹಜೀವಗಳ ಹತ್ಯೆಗೂ ಸಿದ್ಧವಾಗಬೇಕಾಗುತ್ತದೆ. ರಾಘವಾಂಕನು ಅಲ್ಲಿಗೆ ಕಥೆಯನ್ನು ಕೊನೆಯದಾಗಿಸಿ,

**ಧರೆಯೊಳು ಹರಿಶ್ಚಂದ್ರ ಚಾರಿತ್ರಮಂ ಕೇಳ್ದ**
**ನರರೇಳುಜನ್ಮದಿಂ ಮಾಡಿರ್ದ ಪಾತಕವು**
**ತರಣಿಯುದಯದ ಮುಂದೆ ನಿಂದ ತಿಮಿರದ ತೆಱದೆ ಹರೆಯುತಿಹುದೇಕೆಂದೊಡೆ |**
**ಹರನೆಂಬುದೇ ಸತ್ಯ ಸತ್ಯವೆಂಬುದು ಹರನು**
**ಎರಡಿಲ್ಲವೆಂದು ಶ್ರುತಿ ಸಾಱುತಿರಲಾ ವಾಕ್ಯ**
**ವರರೆ ನಿರುತವ ಮಾಡಿ ಮೂಜಗಕೆ ತೋಱದ**
**ಹರಿಶ್ಚಂದ್ರ ಕಥೆಗೇಳ್ದಡೆ ||**

ಎಂಬ ಪದ್ಯದಿಂದ ಕಾವ್ಯ ಮುಕ್ತಾಯವಾಗುತ್ತದೆ. ಅಷ್ಟೇ ಅಲ್ಲ, ಲೋಕದ ಜನ ಇದನ್ನು ಕೇಳಬೇಕು, ಅದರಂತೆ ಬದುಕಬೇಕೆಂದು ಹೇಳಿದ. ಇಂಥದೊಂದು ಕಾವ್ಯವನ್ನು ಕವಿ ರಾಘವಾಂಕ ಯಾವ ಅಪೇಕ್ಷೆಯೂ ಇಲ್ಲದಂತೆ ಹೇಳಿದ್ದೇನೆ ಎನ್ನುತ್ತಾನೆ. ಇದಕ್ಕಿಂತಲೂ ಜಗತ್ತಿಗೆ ಹೇಳಬೇಕಾದದ್ದು ಬೇರೆ ಏನಿದೆ?

* * *

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪ, ರನ್ನ, ಪೊನ್ನ ಇವರೆಲ್ಲ ತಮ್ಮ ತಮ್ಮ ಆಶ್ರಯದಾತರನ್ನು ರಣಶೂರರು, ಪರಬಲದ ನೆತ್ತರ ಕಡಲೊಳಗೆ ಜಿಗುಳೆಯಂತೆ ರಕ್ತ ಕುಡಿದು ಬೆಳೆದವರು, ಸುಂದರಾಂಗರು,




ನಾರಿ ಚಿತ್ತಚೋರ ಪ್ರಿಯಗಳ್ಳರು ಎಂದೆಲ್ಲಾ ಹೇಳಿರುವುದುಂಟು. ರಾಜಕಾರಣದ ಆಶ್ರಯದ ಕರುಣೆಯಲ್ಲಿದ್ದ ಮೇಲೆ ಇದೆಲ್ಲಾ ಅನಿವಾರ್ಯ. ಅವರನ್ನು ಓಲೈಸದೆ ಅನ್ಯಮಾರ್ಗವಿಲ್ಲ. ಆದರೂ ಈ ಕವಿಗಳು ಪ್ರತಿಭಾನ್ವಿತರೇ ಆದುದರಿಂದ ಆಯ್ಕೆ ಮಾಡಿಕೊಂಡ ಲೌಕಿಕ ಕಥನಗಳಲ್ಲಿ ತಮ್ಮ ಕಾವ್ಯಶಕ್ತಿಯನ್ನು ಪ್ರಕಟಪಡಿಸಿರುತ್ತಾರೆ. ಆದರೆ ಈ ಕವಿಗಳೇ ಹೇಳಿಕೊಂಡಂತೆ, ಪಂಡಿತ ವರ್ಗ ಬಿಟ್ಟು ಸಾಮಾನ್ಯರು ಇವರ ಕಥನಗಳನ್ನು ಬದುಕಿನ ನೈತಿಕ ಪಥ್ಯವಾಗಿ ಅದೆಷ್ಟು ಸ್ವೀಕರಿಸಿದರೋ ಹೇಳಲಾಗದು. ಹಾಗಾಗಿ ಕೆಲವು ಜೈನಕವಿಗಳ ಪಂಡಿತ ಮಂಡಳಿಯ ಮುಂದಣ ಕಾವ್ಯ ಮಂಡನೆ, ಅರಸರ ಓಲೈಕೆ, ಅಲ್ಲಿಯ ಪಾರಮ್ಯ, ಯುದ್ಧದಲ್ಲಿ ತೋರಬೇಕಾದ ಪರಾಕ್ರಮ ಇದೆಲ್ಲದರ ಇನ್ನೊಂದು ದಿಕ್ಕಿನಲ್ಲಿ ಹುಟ್ಟಿ ಬಂದ ವಚನಕಾರರ ಸಮೂಹ ದೈವವನ್ನು, ಸಾಹಿತ್ಯ ರಚನಾಕ್ರಮವನ್ನು ಅಸ್ಪೃಶ್ಯರ ಕೇರಿಗೆ ಕೊಂಡೊಯ್ಯುತ್ತದೆ. ಅಷ್ಟೇ ಅಲ್ಲ, ರಾಘವಾಂಕನ ಗುರು ಹರಿಹರನಿಗೆ ಅಷ್ಟು ತೀವ್ರತರದಲ್ಲಿ